## ಆಕರ್ಷಕ ಕಾಣಿಕೆ ಹುಂಡಿ



ಸೃಜನಶೀಲತೆ, ಕಲಾತ್ಮಕತೆ ಎಂಥವರನ್ನೂ ತಟ್ಟನೆ ತನ್ನೆಡೆಗೆ ಸೆಳೆಯುತ್ತದೆ. ಇದಕ್ಕೆ ಉದಾಹರಣೆಯಾಗಿ ದಕ್ಷಿಣ ಕನ್ನಡದ ಬೆಳ್ತಂಗಡಿ ತಾಲ್ಲೂಕಿನ ಪುತ್ರಬೈಲು ಎನ್ನುವಲ್ಲಿ ಹೊಸದಾಗಿ ನಿರ್ಮಾಣಗೊಳ್ಳುತ್ತಿರುವ ಮಹಾಮ್ಮಾಯಿ ದೇವಸ್ಥಾನದ ಕಾಣಿಕೆ ಹುಂಡಿ ಉದಾಹರಣೆಯಾಗಿದೆ. ಬೆಳ್ತಂಗಡಿ – ಕಿಲ್ಲೂರು ರಸ್ತೆಯಲ್ಲಿ ಸಂಚರಿಸುವವರಿಗೆ ರಸ್ತೆಗೆ ಹೊಂದಿಕೊಂಡಂತೆ ನಿರ್ಮಾಣವಾಗುತ್ತಿರುವ ಈ ದೇವಾಲಯದ ಕಾಣಿಕೆ ಹುಂಡಿ ಆಕರ್ಷಿಸುತ್ತದೆ. ಇದೇನು ಸಿಂಹದ ಪ್ರತಿಮೆ ಇದೆ ಎಂದು ನೋಡಿದವರಿಗೆ ನಾಮಫಲಕ ನೋಡಿದ ಬಳಿಕವಷ್ಟೇ ಇದು ಕಾಣಿಕೆ ಹುಂಡಿ ಎಂಬುದು ಅರಿವಿಗೆ ಬರುತ್ತದೆ. ಪಕ್ಕದಲ್ಲೇ ಇರುವ ನಾಮಫಲಕದಲ್ಲಿ ಭಕ್ತರು ಸಿಂಹದ ಬಾಯಿಗೆ ಕಾಣಿಕೆಯನ್ನು ಹಾಕಿ ಎಂದು ನಿರ್ದೇಶಿಸಲಾಗಿದೆ. ಸಿಂಹದ ಪ್ರತಿಮೆಯನ್ನು ಕಂಡು ಆಕರ್ಷಿತರಾದವರು ಈ ಸೃಜನಶೀಲತೆಯನ್ನು ಮೆಚ್ಚಿ ಕಾಣಿಕೆ ಹಾಕುವುದು ಖಂಡಿತ.

—ಅರುಣ್ ಕಿಲ್ಲೂರು, ಬೆಳ್ತಂಗಡಿ



## ಜಲ ನಾರಾಯಣ

ನೇಪಾಳದ ಪಶುಪತಿನಾಥ ದೇವಾಲಯ ಸಮೀಪದಲ್ಲಿದೆ ಜಲ ನಾರಾಯಣ ದೇವಾಲಯ. ಇಲ್ಲಿನ ದೇವರ ಆವಾಸಸ್ಥಾನ ಚೆನ್ನದ ಕಳಶ ಹೊತ್ತ ಕಟ್ಟಡವಲ್ಲ. ನೀರಿನಲ್ಲಿ ಆದಿಶೇಷನ ಮೇಲೆ ಮುಕ್ತವಾಗಿ ಪವಡಿಸಿರುವ ಭಂಗಿಯಲ್ಲಿದೆ. ಸುಂದರವಾದ ಆ ಶಿಲಾ ವಿಗ್ರಹಕ್ಕೆ ನೀರಿನಲ್ಲೇ ನಿಂತುಕೊಂಡು ಪೂಜೆ, ಅಲಂಕಾರ ಎಲ್ಲವೂ ಮಾಡಲಾಗುತ್ತದೆ. ದೇವರನ್ನು ಆರಾಧಿಸಲು ಎಲ್ಲರಿಗೂ ಮುಕ್ತ ಅವಕಾಶವಿದೆ.

—ಪ. ರಾಮಕೃಷ್ಣ ಶಾಸ್ತ್ರಿ, ದಕ್ಷಿಣಕನ್ನಡ

## ಎಲೆಲೇ ಇರುವೆ ಎಲ್ಲೆಲ್ಲೂ ಇರುವೆ



ಇರುವೆ ತಮ್ಮ ಶಿಸ್ತುಬದ್ಧ ಜೀವನಕ್ಕೆ ಸಾಕ್ಷಿ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಅವು ಯಾವ ತಂತ್ರಜ್ಞನಿಗೂ ಕಮ್ಮಿ ಇಲ್ಲ ಎಂಬುದುನ್ನು ಈ ಗೂಡನ್ನು ನೋಡಿದ ಮೇಲೆ ದಂಗಾದೆ. ರೆಂಬೆಯಲ್ಲಿನ ಎಲೆಗಳನ್ನು ಎಳೆದುಕೊಂಡು, ಕಲಾತ್ಮಕವಾಗಿ ಜೋಡಿಸಿ, ಅಂಟಿಸಿ ತಮ್ಮ ರಕ್ಷಣೆಗೋಸ್ಕರ ಹಾಗೂ ತಮ್ಮ ಸಂತತಿಯನ್ನು ಬೆಳೆಸಲು ಜೋಪಾನವಾಗಿ ಕಟ್ಟಿಕೊಳ್ಳುವ ಅವುಗಳ ಸುಂದರ ಚಾಕಚಕ್ಯತೆ ಎಂತಹವರನ್ನೂ ಮೂಕವಿಸ್ಮಿತರನ್ನಾಗಿ ಮಾಡುತ್ತದೆ.

—ಸುಲೋಚನಾ ಜೆ. ರಾವ್, ಬೆಂಗಳೂರು

### ನಿಮ್ಮ ನುಡಿಚಿತ್ರಕ್ಕೆ ಇಲ್ಲಿದೆ ವೇದಿಕೆ

ನೀವು ಕಂಡ ಅಚ್ಚರಿಯ ಸಂಗತಿ, ವಿಷಯ, ವಸ್ತುವಿನ ಕುರಿತು
100 ಶಬ್ದಗಳಲ್ಲಿ ಪುಟ್ಟ ಬರಹವನ್ನು ಬರೆದು ಕಳುಹಿಸಿ.
ಜೊತೆಗೊಂದು ಚೆಂದದ ಚಿತ್ರ ಇರಲೇಬೇಕು.
ಇಮೇಲ್ ವಿಳಾಸ: editorsu@sudha.co.in